## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 815/2017***

***ಚಾಸಾ : 27***
***ಪ್ರಾಸಾ : 14***

| | |
|---|---|
| **ಹೆಸರು** | : ವಾಣಿಶ್ರೀ |
| **ಗಂಡನ ಹೆಸರು** | : ಬಿ ಆರ್ ಪ್ರದೀಪ್ |
| **ವಯಸ್ಸು** | : 49 ವರ್ಷ |
| **ಉದ್ಯೋಗ** | : ಪಿ ಎಸ್ ಐ ವಿರಾಜಪೇಟೆ ಗ್ರಾಮಾಂತರ ಪೋಲಿಸ್ ಠಾಣೆ |
| **ವಾಸಸ್ಥಳ** | : ವಿರಾಜಪೇಟೆ |

**ದಿನಾಂಕ : *09-08-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

***ಮುಖ್ಯ ವಿಚಾರಣೆ: ಶ್ರೀ. ಎಪಿಪಿ ವಕೀಲರಿಂದ :-***

ನಾನು ದಿನಾಂಕ 18-12-2015 ರಿಂದ 08-12-2016 ರವರೆಗೆ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 30-10-2016 ರಂದು ಚಾಸಾ 26 ರವರು ಈ ಪ್ರಕರಣದಲ್ಲಿ ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಎನ್ ಸಿ ಆರ್ ಸಂ. 141/2016 ರಂತೆ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ. ನಂತರ ನಾನು ಚಾಸಾ29 ರವರ ಆದೇಶದ ಮೇರೆಗೆ ದಿನಾಂಕ 05-11-2016 ರಂದು ಚಾಸ-1 ಹಾಗೂ 1 ನೇ ಆರೋಪಿಯ ಕುಟುಂಬ ಕಲಹದ ಆಪ್ತ ಸಮಾಲೋಚನೆಯನ್ನು ಮಾಡುವಂತೆ ಕೋರಿ ಪೊನ್ನಂಪೇಟೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಯವರಿಗೆ ಪತ್ರವನ್ನು ಬರೆದಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಪೊನ್ನಂಪೇಟೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿಯವರಿಗೆ ಮೇಲೆ ಹೇಳಿದಂತೆ ಬರೆದ ಪತ್ರವೆಂದು ಗುರುತಿಸಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಪತ್ರದ ದೃಢೀಕೃತ ನಕಲನ್ನು ನಿಪಿ***20*** ಎಂದು ಗುರುತಿಸಲಾಯಿತು.

***<u>ಪಾಟಿ ಸವಾಲು:</u>* ಶ್ರೀ. ಬಿ ಎಸ್ ಪಿ ಆರೋಪಿ ಪರ ವಕೀಲರಿಂದ :**

ಆರೋಪಿ ಪರ ವಕೀಲರು ಪಾಟಿ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)**

ಓ. ಹೇ. ಕೇ. ಸ. ಇದೆ.

ಸಹಿ/-
**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.